


## 'ಶ್ರೀರಾಮರಕ್ಷಾಸ್ತೋತ್ರ' ದಿಂದ

ತರುಣೌ ರೂಪಸಂಪನ್ನೌ ಸುಕುಮಾರೌ ಮಹಾಬಲೌ ।
ಪುಂಡರೀಕ-ವಿಶಾಲಾಕ್ಷೌ ಚೀರ-ಕೃಷ್ಣಾಜಿನಾಂಬರೌ ॥ ೧ ॥
ಫಲಮೂಲಾಶಿನೌ ದಾಂತೌ ತಾಪಸೌ ಬ್ರಹ್ಮಚಾರಿಣೌ ।
ಪುತ್ರೌ ದಶರಥಸ್ಯೈತೌ ಭ್ರಾತರೌ ರಾಮಲಕ್ಷ್ಮಣೌ ॥ ೨ ॥
ಶರಣ್ಯೌ ಸರ್ವಸತ್ತ್ವಾನಾಂ ಶ್ರೇಷ್ಠೌ ಸರ್ವಧನುಷ್ಮತಾಮ್ ।
ರಕ್ಷಃ ಕುಲನಿಹಂತಾರೌ ತ್ರಾಯೇತಾಂ ನೋ ರಘೂತ್ತಮೌ ॥೩ ॥

ತರುಣರು, ಸುಂದರರು, ಸುಕುಮಾರರು, ಬಲಾಢ್ಯರು, ಕಮಲದಂತೆ ವಿಶಾಲವಾದ ಕಣ್ಣುಳ್ಳವರು, ನಾರುಬಟ್ಟೆ, ಕೃಷ್ಣಾಜಿನಗಳನ್ನು ಧರಿಸಿದವರು, ಹಣ್ಣುಹಂಪಲುಗಳನ್ನು ಭಕ್ಷಿಸುವವರು, ಜಿತೇಂದ್ರಿಯರು, ತಪಸ್ವಿಗಳು, ಬ್ರಹ್ಮಚಾರಿಗಳು, ದಶರಥನ ಮಕ್ಕಳು, ಅಣ್ಣ ತಮ್ಮಂದಿರು ಆಗಿರುವ ಈ ರಾಮಲಕ್ಷ್ಮಣರು ಎಲ್ಲ ಸತ್ತ್ವಗಳಿಂದಲೂ ಶರಣ್ಯರು. ಎಲ್ಲ ಧನುರ್ಧಾರಿಗಳಲ್ಲಿ ಶ್ರೇಷ್ಠರು, ರಾಕ್ಷಸ ಕುಲವನ್ನು ಸಂಹರಿಸುವವರು, ರಘು ಕುಲದಲ್ಲಿ ಉತ್ತಮರು. ಇವರು ನಮ್ಮನ್ನು ರಕ್ಷಿಸಲಿ.

ಚರಿತಂ ರಘುನಾಥಸ್ಯ ಶತಕೋಟಿ-ಪ್ರವಿಸ್ತರಮ್ ।
ಏಕೈಕಮಕ್ಷರಂ ಪುಂಸಾಂ ಮಹಾಪಾತಕ-ನಾಶನಮ್ ॥ ೨ ॥

ಶ್ರೀರಾಮಚಂದ್ರನ ಚರಿತ್ರೆಯು ವಿಸ್ತಾರವಾಗಿದೆ. ಅದರಲ್ಲಿ ನೂರು ಕೋಟಿ ಶ್ಲೋಕಗಳುಂಟು. ಅವುಗಳೊಳಗಿನ ಒಂದೊಂದು ಅಕ್ಷರವೂ ಕೂಡ ಮಾನವರ ಮಹಾಪಾತಕಗಳನ್ನು ನಾಶ ಗೊಳಿಸಲು ಸಮರ್ಥವಾಗಿದೆ.

ವೇದಾಂತ-ವೇದ್ಯೋ ಯಜ್ಞೇಶಃ ಪುರಾಣ-ಪುರುಷೋತ್ತಮಃ ।
ಜಾನಕೀ-ವಲ್ಲಭಃ ಶ್ರೀಮಾನ್ ಅಪ್ರಮೇಯ-ಪರಾಕ್ರಮಃ ॥ ೨ ॥

ವೈಭವಶಾಲಿಯೂ, ಅತುಲ ಪರಾಕ್ರಮಿಯೂ, ಸೀತಾಪತಿಯೂ, ವೇದಾಂತಜ್ಞಾನದಿಂದಲೇ ತಿಳಿಯಲ್ಪಡತಕ್ಕವನೂ ಆದ ರಾಮನು ಯಜ್ಞಾಧಿಪನೂ, ಪುರಾಣ ಪುರುಷೋತ್ತಮನೂ ಆಗಿರುವನು.

---

* ತಾಳ್ಮೆಯೇ ಅತ್ಯುತ್ತಮ ಪ್ರಾರ್ಥನೆ. —ಬುದ್ಧ

* ಸತ್ಯವೇ ಅತ್ಯುತ್ತಮ ಗುಣ. ಆದರೆ ಅದಕ್ಕಿಂತಲೂ ಉತ್ತಮವಾದುದು ಸತ್ಯದ ಆಚರಣೆ. —ಗುರುನಾನಕ್

* ಮಗುವೆಂದು ಕಡೆಗಾಣಿಸಬೇಡಿ. ಅಂತೆಯೇ ದೊಡ್ಡವರೆಂದು ಹೆಚ್ಚು ಬೆಲೆಯನ್ನೂ ಕಟ್ಟಬೇಡಿ. —ಅಕ್ಬರಾಲಿ ಜೇಥಾ

* ಪ್ರೀತಿ ಮತ್ತು ಕರಕೌಶಲ ಸೇರಿದಾಗ ಉತ್ತಮ ಕೃತಿ ತಯಾರಾಗುವುದು ನಿಶ್ಚಿತ. —ಜಾನ್ ಯಂಗ್

* ಮನುಷ್ಯನ ನಡತೆಯೇ ಅವನ ಭಾವನೆಗಳಿಗೆ ಸಾಕ್ಷಿ. —ಲೋಕ್ಸ್

* ಶ್ರೇಷ್ಠ ಸಾಧನೆಗಳೆಲ್ಲವೂ ಬಲದಿಂದ ಸಾಧಿಸಲ್ಪಟ್ಟವುಗಳಲ್ಲ; ಸತತ ಪ್ರಯತ್ನದಿಂದ. —ಜಾನ್ಸನ್

* ಬೆಳವಣಿಗೆ ಸದಾ ಚಟುವಟಿಕೆಯನ್ನು ಅವಲಂಬಿಸಿರುವುದು. ಪ್ರಯತ್ನವಿಲ್ಲದೆ ಉತ್ತಮಿಕೆ ಸಾಧ್ಯವಿಲ್ಲ. ಪ್ರಯತ್ನವೆಂದರೆ ದುಡಿತ, ಕೆಲಸ. ಕೊಳಕು ಕೈಗಳಿಂದ, ಶುದ್ಧ ಮನಗಳಿಂದ ಇಂದು ನಮ್ಮ ದೇಶ ಹೆಚ್ಚು ಮುಂದುವರಿಯಬಹುದು. —ನಾನಿ ಪಾಲ್ಖಿವಾಲ

* ಜೀವನ ಪ್ರಾರಂಭವಾದ ಕೂಡಲೇ ಅಪಾಯವೂ ಪ್ರಾರಂಭವಾಗುತ್ತದೆ. —ರಾಲ್ಫ್ ವಾಲ್ಡೋ ಎಮರ್ಸನ್

* ಸ್ವರ್ಗ ಮತ್ತು ನರಕಗಳ ಸಂಬಂಧವಾಗಿ ನಾನು ನಿಶ್ಚಿತವಾಗಿ ಏನನ್ನೂ ಹೇಳಲಾರೆ. ಏಕೆಂದರೆ, ನನಗೆ ಎರಡೂ ಕಡೆಯೂ ಗೆಳೆಯರಿದ್ದಾರೆ. —ಮಾರ್ಕ್ ಟ್ವೇನ್

* ಇನ್ನೊಬ್ಬರ ವಿರುದ್ಧ ಸೇಡು ತೀರಿಸಿಕೊಳ್ಳುವ ಅತ್ಯುತ್ತಮ ವಿಧಾನವೆಂದರೆ ನಾವು ಮೌಲ್ಯವಂತ ಬಾಳನ್ನು ಬದುಕುವುದು. —ಜಾರ್ಜ್ ಹರ್ಬರ್ಟ್